ಮಾನವನ ಬಾಳು ಸಾರ್ಥಕವಾಗಬೇಕಾದರೆ ಅವನು ನಡೆದುಕೊಳ್ಳಬೇಕಾದಂಥ ಕ್ರಮವನ್ನು ದಾಸರು, 'ಫಲವಿದು ಬಾಳ್ದುದಕೆ' ಎಂಬ ಕೀರ್ತನೆಯಲ್ಲಿ ವಿಶದವಾಗಿ ತಿಳಿಸಿರುವರು. ಈ ಬದುಕಿನಲ್ಲಿ ಎಷ್ಟೇ ಘೋರವಾದ ದುಃಖ, ಕಷ್ಟಗಳು ಒದಗಿದರೂ ಭಗವಂತನ ನಾಮಸ್ಮರಣೆಯೊಂದಿದ್ದರೆ ಸಾಕು ಎಂಬುದನ್ನು ಮಾರ್ಮಿಕವಾಗಿ ಈ ರೀತಿ ತಿಳಿಸುತ್ತಾರೆ.

**ನಿನ್ನ ವಿಸ್ಮೃತಿ ಜನ್ಮಜನ್ಮಕ್ಕೆ ಕೊಡದಿರು**
**ಎನ್ನ ಕುಲದೈವ ಎಂದೆಂದು । ಎಂದೆಂದು ನಿನಗಾನು**
**ವಿನ್ನೈಪೆ ಬಿಡದೆ ಇನಿತೆಂದು ...**
**ಹಗಲು ಇರಳು ಸ್ಮರಣೆಯೊದಗುತಿರೆ ಜಿಹ್ವೆಯೊಳು**
**ಬೆಗಲಿನ್ನುಂಟೆ ಸಾಧನಗಳು । ಸಾಧನಗಳೇತಕ್ಕೆ**
**ಜಗದೊಳಗೆ ಇನ್ನು ಅವರಿಗೆ...**

ಭಗವಂತನ ನಾಮಸ್ಮರಣೆಯೊಂದಿದ್ದರೆ ಎಂತಹ ಘೋರವಾದ ನರಕವೂ ಸೈ; ಆದರೆ ನಾಮಸ್ಮರಣೆಯೊಂದಿಲ್ಲದೆ ಎಂತಹ ಪುಣ್ಯ ತರುವ ಸ್ವರ್ಗವನ್ನೂ ಒಲ್ಲೆ ಎಂಬ ಕೆಚ್ಚು ಈ ದಾಸವರೇಣ್ಯರದು. ಶ್ರೀಹರಿಯ ವಿಸ್ಮರಣೆಯೇ ಮಹಾಪಾಪ; ಸ್ಮರಣೆಯೇ ಮಹಾಪುಣ್ಯ; ಸ್ಮರಣಸಹಿತವಾಗಿ ವಿಹಿತ ಕರ್ಮಗಳನ್ನು ಆಚರಿಸಬೇಕೆಂಬುದೇ ದಾಸರ ಆಶಯ.

**ನಿನ್ನ ವಿಸ್ಮೃತಿ ಕೊಡುವ ಪುಣ್ಯ ಕರ್ಮಗಳೊಲ್ಲೆ**
**ನಿನ್ನನ್ನೇ ನೆನೆವ ಮಹಪಾಪ । ಮಹಪಾಪ ಕರ್ಮಗಳು**
**ಜನ್ಮಜನ್ಮದಲಿ ಇರಲಯ್ಯ...**

ಹರಿಕಥಾಮೃತಸಾರವು ತೆಲುಗು, ಮರಾಠಿ, ತಮಿಳು ಮುಂತಾದ ಭಾಷೆಗಳಿಗೂ ಅನುವಾದಗೊಂಡು ನೆರೆಯ ಪ್ರಾಂತ್ಯಗಳಲ್ಲೂ ತುಂಬ ಜನಪ್ರಿಯವಾಗಿದೆ. ಈಚೆಗೆ ಇದು ಇಂಗ್ಲಿಷಿಗೂ ಭಾಷಾಂತರವಾಗಿದೆ. ಶ್ರೀ ಜಗನ್ನಾಥದಾಸರ 'ರಂಗ ನಿನ್ ಕೊಂಡಾಡುವ' 'ದಾಸೋऽಹಂ ತವ ದಾಸೋऽಹಂ' 'ಶ್ರೀವೆಂಕಟಶೈಲಾಧಿಪ ನಮೋ,' 'ಶ್ರೀನಿಕೇತನ,' 'ಏಕೆ ಮೂಕನಾದ್ಯೋ' 'ಅಶನ ವಸನಗಳೀವ ದುರಿತವನಕುಠಾರಿ' ಮೊದಲಾದ ಕೀರ್ತನೆಗಳು, ಸುವ್ವಾಲಿಗಳು, ಸುಳಾದಿಗಳು ಭಕ್ತಿಜ್ಞಾನಭರಿತವಾದ ನೂರಾರು ಷಟ್ಪದಿಗಳೂ ಜನಮನದಲ್ಲಿ ಹಚ್ಚಹಸುರಾಗಿ ಈಗಲೂ ನಿಂತಿವೆ.

---

## ಪ್ರಹಸನ ಪ್ರಸಂಗ

ರಾಮಣ್ಣನ ಮನೆಯ ಫೋನ್ ಬೆಳಿಗ್ಗೆ ಬೆಳಿಗ್ಗೆಯೇ ಶಬ್ದ ಮಾಡಲಾರಂಭಿಸಿತು. ನಿದ್ದೆಯಿಂದೆದ್ದ ರಾಮಣ್ಣ "ಹಲೋ" ಎಂದ. ಅತ್ತ ಕಡೆಯ ಧ್ವನಿ ಹೇಳಿತು, "ನಿನ್ನ ಪ್ರಿಯ ಸ್ನೇಹಿತ ಭೀಮಣ್ಣ ನೆನ್ನೆ ಸಂಜೆ ತೀರಿಕೊಂಡ. ಕುರ್ಚಿಯಲ್ಲಿ ಕುಳಿತು ಟಿ.ವಿ. ನೋಡುತ್ತಿದ್ದ. ಇದ್ದಕ್ಕಿದ್ದಂತೆ ಹೋಗಿಬಿಟ್ಟ!" ರಾಮಣ್ಣ ತಬ್ಬಿಬ್ಬಾಗಿ ಹೋದ. ಅನುಕಂಪೆಯನ್ನು ಸೂಚಿಸುತ್ತ ಹೇಳಿದ, "ಅಯ್ಯೋ ಹೌದೆ! ಅದೆಂತಹ ಟಿ.ವಿ. ಕಾರ್ಯಕ್ರಮವಪ್ಪ! ಪ್ರಾಣವೇ ಹೋಗುವಷ್ಟು ಕೆಟ್ಟದಾಗಿದ್ದದ್ದನ್ನು ಏಕೆ ನೋಡುತ್ತಿದ್ದ!"

❁✿▲✿❁

ಆರು ವರ್ಷದ ಬಾಲಕನೊಬ್ಬ ತಾಯಿ ತಂದೆಯರೊಂದಿಗೆ ಚರ್ಚಿಗೆ ಬಂದಿದ್ದ. ಪಾದ್ರಿಗಳು ಉಪನ್ಯಾಸವನ್ನು ಮಾಡುತ್ತ ಹೇಳಿದರು, "ದೇವರೇ ಎಲ್ಲವನ್ನೂ ಸೃಷ್ಟಿಸಿರುವುದು." ಬಾಲಕ ಕೂಡಲೇ ಎದ್ದು ನಿಂತು ಹೇಳಿದ, "ದೇವರು ಎಲ್ಲವನ್ನೂ ಮಾಡುವುದಿಲ್ಲ. ಬಹಳಷ್ಟು ಪದಾರ್ಥಗಳು ಚೈನಾದಲ್ಲಿ ತಯಾರಾಗುತ್ತವೆ."

❁✿▲✿❁

ದಂತವೈದ್ಯರ ಬಳಿಗೆ ರೋಗಿ ಬಂದು ಚಿಕಿತ್ಸೆಗಾಗಿ ಬಾಯಿ ತೆರೆದ. ವೈದ್ಯರು ಪರೀಕ್ಷೆ ಮಾಡಿ ಹೇಳಿದರು, "ನಿಮಗೆ ಜ್ಞಾನ ತಪ್ಪಿಸಿ ಹಲ್ಲುಗಳನ್ನು ಕೀಳಬೇಕಾಗುತ್ತದೆ." ರೋಗಿಯು "ಒಂದು ನಿಮಿಷ ತಡೆಯಿರಿ" ಎಂದು ಹೇಳುತ್ತ ತನ್ನ ಜೇಬಿನಲ್ಲಿದ್ದ ಹಣ ಎಣಿಸಲು ಪ್ರಾರಂಭಿಸಿದ. "ನೀವು ಮುಂಗಡವಾಗಿ ಹಣ ನೀಡಬೇಕಿಲ್ಲ" ಎಂದು ವೈದ್ಯ ಹೇಳಿದಾಗ ರೋಗಿ ಹೇಳಿದ, "ಇಲ್ಲ. ನೀವು ಜ್ಞಾನ ತಪ್ಪಿಸುವ ಮುಂಚೆ ಎಷ್ಟು ಹಣವಿದೆ ಎಂದು ನೋಡಿಕೊಳ್ಳುತ್ತಿರುವೆ!"

❁✿▲✿❁

ವೈದ್ಯನಾಗಿ ತೇರ್ಗಡೆಯಾದ ಮೇಲೆ ಯುವಕನೊಬ್ಬ ಚರ್ಮರೋಗಗಳ ತಜ್ಞನಾಗಲು ಬಯಸಿ ಆಸ್ಪತ್ರೆಯಲ್ಲಿ ತರಬೇತಿಗೆ ಸೇರಿದ. ಅವನ ಸ್ನೇಹಿತ ಕೇಳಿದ, "ಅಲ್ಲಯ್ಯಾ ಶಸ್ತ್ರಚಿಕಿತ್ಸೆ, ಅಥವಾ ಮೂಳೆ–ಮೆದುಳುಗಳ ತಜ್ಞನಾಗುವುದು ಬಿಟ್ಟು ಚರ್ಮದ ವಿಭಾಗವನ್ನು ಏಕೆ ಆರಿಸಿಕೊಂಡೆ?" ಈತ ಹೇಳಿದ, "ಮೂರು ಮುಖ್ಯ ಕಾರಣಗಳಿವೆ. ಒಂದು ಚರ್ಮರೋಗಿಗಳು ರಾತ್ರಿಯ ಹೊತ್ತು ಬಂದು ಪೀಡಿಸುವುದಿಲ್ಲ. ಎರಡನೆಯದು ಅವರು ಆ ರೋಗದಿಂದ ಸಾಯುವುದಿಲ್ಲ. ಮೂರನೆಯದು ಆ ರೋಗ ವಾಸಿಯೂ ಆಗುವುದಿಲ್ಲ!"